**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1418/2023**

**ಸಿ.ಡಬ್ಲ್ಯೂಃ 6, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಅಭಿನವ್ ಶ್ರೀವಾತ್ಸವ್

ತಂದೆಯ ಹೆಸರು : ಎ. ಕೆ. ಶ್ರೀವಾತ್ಸವ

ವಯಸ್ಸು : 40 ವರ್ಷ

ಉದ್ಯೋಗ : ಸುಪರಿಂಟೆಂಡೆಂಟ್ ಆಪ್ ಕಸ್ಟಂ

ವಾಸ್ತವ್ಯ : ಖಾಯಂ ವಿಳಾಸಃ ಲಕ್ನೋ

ಪ್ರಸ್ತುಸ ವಿಳಾಸಃ ಗೋವಾ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ26/06/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 19.02.2021 ರಂದು ನಮಗೆ ಮಾಹಿತಿಯು ಬಂದ ಪ್ರಕಾರ ಶಮಸುದ್ದೀನ್ ನವೀದ್ ಮೌಲಾ ಎಂಬುವವರು ಚಿನ್ನವನ್ನು ಮುಂಬಯಿಯಿಂದ ಲಕ್ನೊ ವಿಗೆ ಗೋ ಎರ್ ಪ್ಲಾಟ್ ಮೂಲಕ ವರ್ಗಾವಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ನಾವು ಲಕ್ನೊ ಎರ್ ಪೊರ್ಟ ಗೆ ಹೋಗಿ ಪ್ಲಾಯಿಟ್ ನಿಂದ ಬಂದ ವ್ಯಕ್ತಿಗಳನ್ನು ವಿಚಾರಿಸಲಾಗಿ ಆರೋಪಿಯ ತನ್ನ ಹೆಸರನ್ನು ಶಮಸುದ್ದೀನ್ ನವೀದ್ ಮೊಹಮ್ಮದ್ ಅಲಿ ಮೌಲಾ ಎಂದು ಹೇಳಿರುತ್ತಾನೆ. ಆಗ ಆರೋಪಿಗೆ ನಾವು ವಿಚಾರಿಸಿದಾಗ ಆರೋಪಿಯು ಮೊದಲು ಮಾಹಿತಿಯನ್ನು ನೀಡಲು ನಿರಾಕರಿಸಿದಾಗ ನಾವು ನೊಟೀಸನ್ನು ಸೆಕ್ಷನ್ 102 ರಡಿಯಲ್ಲಿ ನೀಡಿ ಅರೋಪಿಯ ತನಿಖೆಯನ್ನು ಮಾಡುತ್ತೇವೆಂದು ಹೇಳಿದಾಗ ಆರೋಪಿಯು ತಮ್ಮ ಬಳಿ ಚಿನ್ನ ಇರುವ ಬಗ್ಗೆ ಹೇಳಿರುತ್ತಾರೆ. ಆರೋಪಿಯನ್ನು ನಮ್ಮ ಕಚೇರಿಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಯ ಅಂಗಜಪ್ತಿ ಮಾಡಿದಾಗ ಆತನ ಜೀನ್ಸ ಪ್ಯಾಂಟ್ ಕಿಸೆಯಿಂದ ಸಾಕಷ್ಟು ಆದಾರ ಕಾರ್ಡ ಮತ್ತು ಡ್ರೈವಿಂಗ್ ಲೈಸನ್ಸಗಳು ಸಿಕ್ಕಿರುತ್ತದೆ. ಎಲ್ಲಾ ದಾಖಲೆಗಳ ಮೇಲೆ ಆರೋಪಿಯ ಭಾವಚಿತ್ರ ಇರುತ್ತದೆ. ಆರೋಪಿಯ ಅಂಗ ಜಪ್ತಿ ಮಾಡಿದಾಗ ಆರೋಪಿಯ ಜೀನ್ಸ ಪ್ಯಾಂಟಿನ ಕಿಸೆಯಿಂದ ಒಟ್ಟು 933 ಗ್ರಾಮಂ ಚಿನ್ನವು ಆರೋಪಿಯಿಂದ ಸಿಕ್ಕಿರುತ್ತವೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ನಾವು ಹೇಳುವ ಸದರಿ ಘಟನೆಯು ಲಕ್ನೋನ ಎರ್ ಪೋರ್ಟನಲ್ಲಿ ಆಗಿರುತ್ತದೆ. ನಮ್ಮ ಪ್ರಕಾರ ಆರೋಪಿಯ ಮುಂಬಯಿಯಿಂದ ಲಕ್ನೋವಿಗೆ ಬರುತ್ತಿದ್ದರು. ಆರೋಪಿ ಬೋರ್ಡಿಂಗ್ ಪಾಸ್ ಅನ್ನು

ತೆಗೆದುಕೊಂಡು ಬರುತ್ತಿದ್ದರು. ಅದನ್ನು ನಾವು ಜಪ್ತಿ ಮಾಡಿದ್ದೇವೆ. ಆರೋಪಿಯಿಂದ ಜಪ್ತಿ ಮಾಡಿರುವ ಬೋರ್ಡಿಂಗ್ ಪಾಸ್ ಅನ್ನು ಭಟ್ಕಳ ನ್ಯಾಯಾಲಯದಲ್ಲಿ ಸದರಿ ಪ್ರಕರಣದ ದಾಖಲೆಯಲ್ಲಿ ನನಗೆ ತೋರಿಸಿಲ್ಲ ಮತ್ತು ನಾವು ಜಪ್ತಿ ಮಾಡಿರುವ ಚಿನ್ನವನ್ನು ಈ ನ್ಯಾಯಾಲಯದಲ್ಲಿ ನನಗೆ ತೋರಿಸಿಲ್ಲ. ನಾವು ಹೇಳುವಂತೆ ಜಪ್ತಿ ಮಾಡಿರುವ ಹಲವು ಆಧಾರ್ ಕಾರ್ಡಗಳನ್ನು ಈ ದಿನ ನ್ಯಾಯಾಲಯದಲ್ಲಿ ನನಗೆ ತೋರಿಸಿಲ್ಲ. ಸದರಿ ಜಪ್ತಿಗೆ ಸಂಬಂಧಿಸಿದ ಪ್ರಕ್ರಿಯೆ ನಮ್ಮ ಕಚೇರಿಯಲ್ಲಿ ಆಗಿರುತ್ತದೆ. ನಾು ಪಂಚನಾಮೆಗೆ ಸಹಿ ಮಾಡಿಲ್ಲ ಆದರೆ ನಾನು ಪಂಚನಾಮೆಯಲ್ಲಿ ಭಾಗಿಯಾಗಿದ್ದೆ ಮತ್ತು ಅದನ್ನು ಪಂಚನಾಮೆಯಲ್ಲಿ ನಮೂದು ಮಾಡಲಾಗಿದೆ. ಪಂಚನಾಮೆಗೆ ಪಂಚರು ಯಾರು ಆಗಿದ್ದರೆಂದು ನನಗೆ ಈಗ ನೆನಪಿಲ್ಲ. ಆದರೆ ಎರ್ ಪೋರ್ಟನಿಂದ ಪಂಚರನ್ನು ಕರೆದು ತಂದಿರುತ್ತೇವೆ. ನಮ್ಮ ಮೇಲಾಧಿಕಾರಿಗಳು ಪಂಚನಾಮೆಗೆ ಮಾಹಿತಿಯನ್ನು ನೀಡಿರುತ್ತಾರೆ. ಮೂಲ ಪಂಚನಾಮೆಯನ್ನು ಈ ದಿನ ನ್ಯಾಯಾಲಯದಲ್ಲಿ ನನಗೆ ತೋರಿಸಿಲ್ಲ. ಸದರಿ ಘಟನೆಯ ಬಗ್ಗೆ ಕಸ್ಟಂ ಆ್ಯಕ್ಟ ನ ಪ್ರಕಾರ ಆರೋಪಿಯ ವಿರುದ್ಧ ಕ್ರಮ ತೆಗೆದುಕೊಂಡಿರುತ್ತೇವೆ. ಕಸ್ಟ ಅ್ಯಕ್ಟನಡಿಯಲ್ಲಿ ದಾಖಲಿಸಿರುವ ಪ್ರಕರಣವು ಜಾಲ್ತಿಯಲ್ಲಿದೆಯೋ ಅಥವಾ ಮುಕ್ತಾಯಗೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಭಟ್ಕಳದ ನ್ಯಾಯಾಲಯ ಪ್ರಕರಣದಲ್ಲಿ ಯಾರು, ಯಾವಾ ದೂರನ್ನು ದಾಖಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಭಟ್ಕಳ ಪೊಲೀಸರು ನನಗೆ ಸದರಿ ಪ್ರಕರಣದ ಕುರಿತು ವಿಚಾರಣೆ ಮಾಡಿಲ್ಲ. ನಾನು ಭಟ್ಕಳ ಪೊಲೀಸರ ಸಮಕ್ಷಮದಲ್ಲಿ ಹೇಳಿಕೆ ನೀಡಿಲ್ಲ. ಪೊಲೀಸು ದಾಖಲಿಸಿರುವ ಸುಳ್ಳು ಪ್ರಕರಣಕ್ಕೆ ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೇಳುವ ಪ್ರಕಾರ ಆರೋಪಿಯು ಹಲವು ಆಧಾರ್ ಕಾರ್ಡಗಳನ್ನು ಹೊಂದಿದ್ದರೆಂದು ಸದರಿ ಆಧಾರ್ ಕಾರ್ಡಗಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಜಪ್ತಿ ಮಾಡಿರುವ ಆದಾರ್ ಕಾರ್ಡಗಳು ಅಸಲಿ ಅಥವಾ ನಕಲಿ ಇದೆಯಾ

ಎಂದು ನನಗೆ ಗೊತ್ತಿಲ್ಲ. ಅಸಲಿ ಅಥವಾ ನಕಲಿ ದಾಖಲೆಗಳನ್ನು ಪರಿಶೀಲಿಸಲು ಪ್ರತ್ಯೇಕವಾದ ಇಲಾಖೆ ಇದೆ. ಸದರಿ ದಾಖಲೆಗಳ ಅಸಲಿ ಅಥವಾ ನಕಲಿ ಇದೆಯಾ ಎಂದು ಪರಿಶೀಲನೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

**ಮರುವಿಚಾರಣೆ ಇಲ್ಲ**

(**ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು** )

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1418/2023**

**ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಹರ್ಷ ಶ್ರಿವಾತ್ಸವ್
ತಂದೆಯ ಹೆಸರು : ಶ್ರೀ ಸತ್ಯಪ್ರಸಾದ್ ಶ್ರಿವಾತ್ಸವ್
ವಯಸ್ಸು : 40 ವರ್ಷ
ಉದ್ಯೋಗ : ಸಿನೀಯರ್ ಇಂಟಲಿಜನ್ಸ ಆಪಿಸರ್, ಲಕ್ನೊ
ವಾಸ್ತವ್ಯ : ಲಕ್ನೊ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ26/06/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 19.02.2021 ರಂದು ನಮಗೆ ಮಾಹಿತಿಯು ಬಂದ ಪ್ರಕಾರ ಶಮಸುದ್ದೀನ್ ನವೀದ್ ಮೌಲಾ ಎಂಬುವವರು ಚಿನ್ನವನ್ನು ಮುಂಬಯಿಯಿಂದ ಲಕ್ನೊ ವಿಗೆ ಗೋ ಎರ್ ಪ್ಲಾಟ್ ಮೂಲಕ ವರ್ಗಾವಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ನಾವು ಲಕ್ನೊ ಎರ್ ಪೊರ್ಟ ಗೆ ಹೋಗಿ ಪ್ಲ್ಯಾಯಿಟ್ ನಿಂದ ಬಂದ ವ್ಯಕ್ತಿಗಳನ್ನು ವಿಚಾರಿಸಲಾಗಿ ಆರೋಪಿಯ ತನ್ನ ಹೆಸರನ್ನು ಶಮಸುದ್ದೀನ್ ನವೀದ್ ಮೊಹಮ್ಮದ್ ಅಲಿ ಮೌಲಾ ಎಂದು ಹೇಳಿರುತ್ತಾನೆ. ನಮಗೆ ಸದರಿ ಮಾಹಿತಿಯು ಫಹದ್ ಇಮಾಮ್ ಅವರಿಂದ ಬಂದಿರುತ್ತದೆ. ಆಗ ಆರೋಪಿಗೆ ನಾವು ವಿಚಾರಿಸಿದಾಗ ಆರೋಪಿಯು ಮೊದಲು ಮಾಹಿತಿಯನ್ನು ನೀಡಲು ನಿರಾಕರಿಸಿದಾಗ ನಾವು ನೊಟೀಸನ್ನು ಸೆಕ್ಷನ್ 102 ರಡಿಯಲ್ಲಿ ನೀಡಿ ಅರೋಪಿಯ ತನಿಖೆಯನ್ನು ಮಾಡುತ್ತೇವೆಂದು ಹೇಳಿದಾಗ ಆರೋಪಿಯು ತಮ್ಮ ಬಳಿ ಚಿನ್ನ ಇರುವ ಬಗ್ಗೆ ಹೇಳಿರುತ್ತಾರೆ. ಆಗ ಎರ್ ಪೊರ್ಟ ನಲ್ಲಿ ಸಾಕಷ್ಟು ಜಾಗ ಇಲ್ಲದ ಕಾರಣ ಆರೊಪಿಯನ್ನು ನಮ್ಮ ಕಚೇರಿಗೆ ಕರೆದುಕೊಂಡು ಹೋಗಿದ್ದೇವೆ. ಆರೋಪಿಯ ಅಂಗಜಪ್ತಿ ಮಾಡಿದಾಗ ಆತನ ಜೀನ್ಸ ಪ್ಯಾಂಟ್ ಕಿಸೆಯಿಂದ 2 ಆದಾರ ಕಾರ್ಡ , 2 ಡ್ರೈವಿಂಗ್ ಲೈಸನ್ಸ ಮತ್ತು ಪಾಸ್ ಪೊರ್ಟ ಸಿಕ್ಕಿರುತ್ತದೆ. ಎಲ್ಲಾ ದಾಖಲೆಗಳ ಮೇಲೆ ಆರೋಪಿಯ ಭಾವಚಿತ್ರ ಇರುತ್ತದೆ. 1 ಆಧಾರ ಕಾರ್ಡಗಳಲ್ಲಿ ಫಹದ್ ಇಮಾಮ್ ಹೆಸರು ಮತ್ತೊಂದು ಆಧಾರ್ ಕಾರ್ಡ ನಲ್ಲಿ ಶಮಸುದ್ದೀನ್ ನವೀದ್ ಮೊಹಮ್ಮದ್ ಅಲಿ

ಮೌಲಾ ಎಂಬ ಹೆಸರು ಇತ್ತು ಮತ್ತು 1 ಡ್ರೈವಿಂಗ್ ಲೈಸನ್ಸ ನಲ್ಲಿ ಆಧಿ ಎಂಬ ಹೆಸರು ಮತ್ತೊಂದು ಡ್ರೈವಿಂಗ್ ಲೈಸನ್ಸ ನಲ್ಲಿ ಅಬ್ದುಲ್ಲಾ ಎಂಬ ಹೆಸರು ಇತ್ತು. ಪಾಸ್ ಪೋರ್ಟ ಶಮಸುದ್ದೀನ್ ನವೀದ್ ಹೆಸರಿನಲ್ಲಿತ್ತು. ಆಗ ಆರೋಪಿಯನ್ನು ವಿಚಾರಿಸಿದಾಗ ತನ್ನ ಗುರುತನ್ನು ಮುಚ್ಚಿಡಲು ಬೇರೆ ಬೇರೆ ಹೆಸರಿನಲ್ಲಿ ದಾಖಲೆಗಳನ್ನು ತಯಾರಿಸಿದ್ದೇನೆಂದು ಉತ್ತರಿಸಿರುತ್ತಾರೆ. ಆರೋಪಿಯ ಅಂಗ ಜಪ್ತಿ ಮಾಡಿದಾಗ ಆರೋಪಿಯ ಜೀನ್ಸ ಪ್ಯಾಂಟಿನ ಕಿಸೆಯಿಂದ ಒಟ್ಟು 933 ಗ್ರಾಮಂ ಚಿನ್ನವು ಆರೋಪಿಯಿಂದ ಸಿಕ್ಕಿರುತ್ತವೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ನಾವು ಹೇಳುವ ಸದರಿ ಘಟನೆಯು ಲಕ್ನೊನಲ್ಲಿ ಆಗಿರುತ್ತದೆ. ಆರೋಪಿಯಿಂದ ಲಕ್ನೊ ನ ಪ್ರಕರಣದಲ್ಲಿ ಆರೋಪಿಯ ಬೋರ್ಡಿಂಗ್ ಪಾಸ್ ಅನ್ನು ಜಪ್ತಿ ಮಾಡಿದ್ದೇವೆ. ಆರೋಪಿಯಿಂದ ಜಪ್ತಿ ಮಾಡಿರುವ ಬೋರ್ಡಿಂಗ್ ಪಾಸ್ ಅನ್ನು ಭಟ್ಕಳ ನ್ಯಾಯಾಲಯದಲ್ಲಿ ಸದರಿ ಪ್ರಕರಣದ ದಾಖಲೆಯಲ್ಲಿ ನೋಡಿಲ್ಲ. ಸದರಿ ಘಟನೆಯ ಪಿರ್ಯಾದಿಯನ್ನು ಯಾರು, ಯಾವಾಗ, ಯಾವ ಕಾರಣಕ್ಕೆ ದಾಖಲಿಸಿದ್ದಾರೆಂದು ನನಗೆ ಮಾಹಿತಿ ಇಲ್ಲ. ಸದರಿ ಘಟನೆ ಬಗ್ಗೆ ಭಟ್ಕಳ ಪೊಲೀಸ್ ಠಾಣೆಯಲ್ಲಿ ಯಾವುದೇ ಹೇಳಿಕೆ ನೀಡಿಲ್ಲ. ನಾವು ಹೇಳುತ್ತಿರುವ ಹಾಗೆ ಸಾಕಷ್ಟು ಆಧಾರ ಕಾರ್ಡಗಳನ್ನು ಆರೊಪಿಯಿಂದ ಜಪ್ತಿ ಮಾಡಿದ್ದೇವೆಂದು ಸದರಿ ಆದಾರ ಕಾರ್ಡಗಳನ್ನು ಭಟ್ಕಳ ನ್ಯಾಯಾಲಯದಲ್ಲಿ ಸದರಿ ಪ್ರರಕಣದ ಕಡತದಲ್ಲಿ ಇರಲಿಲ್ಲ ಮತ್ತು ಜಪ್ತು ಮಾಡಿರುವ ಚಿನ್ನ ಸದರಿ ಭಟ್ಕಳ ನ್ಯಾಯಾಲಯದಲ್ಲಿ ಸದರಿ ಪ್ರಕರಣದ ಕಡತದಲ್ಲಿ ಇರಲಿಲ್ಲ ಮತ್ತು ಅವುಗಳನ್ನು ನಾನು ನೋಡಿರುವುದಿಲ್ಲ. ನಕಲಿ ದಾಖಲೆಗಳನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನಗೆ ಭಟ್ಕಳ ನ್ಯಾಯಾಲಯದಲ್ಲಿ ತೋರಿಸಿಲ್ಲ. ಪಂಚನಾಮೆಯನ್ನು ನಾವು ತಯಾರಿಸಿಲ್ಲ ಎಂದರೆ ಸರಿಯಲ್ಲ.ನಾವು ಹೇಳುವಂತಹ ಯಾವುದೇ ಪಂಚನಾಮೆಯ ಉರ್ಜಿತದಲ್ಲಿ ಇಲ್ಲ ಎಂದರೆ ಸರಿಯಲ್ಲ. ಕಸ್ಟಂ ಕಾನೂನಿನ ಪ್ರಕಾರ ಕಸ್ಟಂ ಅಧಿಕಾರಿಯ ಮುಂದೆ ಸದರಿ ಘಟನೆಯ ಬಗೆ ಲಕ್ನೊದಲ್ಲಿ ಪ್ರಕರಣದ

ದಾಖಲಿಸಲಾಗಿದೆ . ಲಕ್ನೊವಿನ ಪ್ರಕರಣದಲ್ಲಿ ಆದೇಶ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1418/2023**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರು : ಬದ್ರೀಶ್ ರಾಯ್

ತಂದೆಯ ಹೆಸರು : ರಾಮ್ ಆಶ್ರಯ್ ರಾಯ್

ವಯಸ್ಸು : 32 ವರ್ಷ

ಉದ್ಯೋಗ : ಇಂಟಲಿಜನ್ಸ ಆಪೀಸರ್ , ಲಕ್ನೊ

ವಾಸ್ತವ್ಯ : ಲಕ್ನೊ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ26/06/2024**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 19.02.2021 ರಂದು ನಮಗೆ ಮಾಹಿತಿಯು ಬಂದ ಪ್ರಕಾರ ಶಮಸುದ್ದೀನ್ ನವೀದ್ ಮೌಲಾ ಎಂಬುವವರು ಚಿನ್ನವನ್ನು ಮುಂಬಯಿಯಿಂದ ಲಕ್ನೊ ವಿಗೆ ಪ್ಲಾಟ್ ಮೂಲಕ ವರ್ಗಾವಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ನಾವು ಲಕ್ನೊ ಎರ್ ಪೊರ್ಟ ಗೆ ಹೋಗಿ ಪ್ಲಾಯಿಟ್ ನಿಂದ ಬಂದ ವ್ಯಕ್ತಿಗಳನ್ನು ವಿಚಾರಿಸಲಾಗಿ ಆರೋಪಿಯ ತನ್ನ ಹೆಸರನ್ನು ಶಮಸುದ್ದೀನ್ ನವೀದ್ ಮೊಹಮ್ಮದ್ ಅಲಿ ಮೌಲಾ ಎಂದು ಹೇಳಿರುತ್ತಾನೆ. ನಮಗೆ ಸದರಿ ಮಾಹಿತಿಯು ಫಹದ್ ಇಮಾಮ್ ಅವರಿಂದ ಬಂದಿರುತ್ತದೆ. ಆಗ ಆರೋಪಿಗೆ ನಾವು ವಿಚಾರಿಸಿದಾಗ ಆರೋಪಿಯು ಮೊದಲು ಮಾಹಿತಿಯನ್ನು ನೀಡಲು ನಿರಾಕರಿಸಿದಾಗ ನಾವು ನೊಟೀಸನ್ನು ನೀಡಿ ಅರೋಪಿಯ ತನಿಖೆಯನ್ನು ಮಾಡುತ್ತೇವೆಂದು ಹೇಳಿದಾಗ ಆರೋಪಿಯು ತಮ್ಮ ಬಳಿ ಚಿನ್ನ ಇರುವ ಬಗ್ಗೆ ಹೇಳಿರುತ್ತಾರೆ. ಆಗ ಎರ್ ಪೊರ್ಟ ನಲ್ಲಿ ಸಾಕಷ್ಟು ಜಾಗ ಇಲ್ಲದ ಕಾರಣ ಆರೊಪಿಯನ್ನು ನಮ್ಮ ಕಚೇರಿಗೆ ಕರೆದುಕೊಂಡು ಹೋಗಿದ್ದೇವೆ. ಆರೋಪಿಯ ಅಂಗಜಪ್ತಿ ಮಾಡಿದಾಗ ಆರೋಪಿಯಿಂದ 2 ಆದಾರ ಕಾರ್ಡ , 2 ಡ್ರೈವಿಂಗ್ ಲೈಸನ್ಸ ಮತ್ತು ಪಾಸ್ ಪೊರ್ಟ ಸಿಕ್ಕಿರುತ್ತದೆ. ಎಲ್ಲಾ ದಾಖಲೆಗಳ ಮೇಲೆ ಆರೋಪಿಯ ಭಾವಚಿತ್ರ ಇರುತ್ತದೆ. 1 ಆಧಾರ ಕಾರ್ಡಗಳಲ್ಲಿ ಫಹದ್ ಇಮಾಮ್ ಹೆಸರು ಮತ್ತೊಂದು ಆಧಾರ್ ಕಾರ್ಡ ನಲ್ಲಿ ಶಮಸುದ್ದೀನ್ ನವೀದ್ ಮೊಹಮ್ಮದ್ ಅಲಿ ಮೌಲಾ ಎಂಬ ಹೆಸರು ಇತ್ತು ಮತ್ತು 1 ಡ್ರೈವಿಂಗ್ ಲೈಸನ್ಸ ನಲ್ಲಿ ಆಧಿ ಎಂಬ ಹೆಸರು ಮತ್ತೊಂದು ಡ್ರೈವಿಂಗ್ ಲೈಸನ್ಸ ನಲ್ಲಿ ಅಬ್ದುಲ್ಲಾ ಎಂಬ ಹೆಸರು ಇತ್ತು. ಪಾಸ್ ಪೊರ್ಟ

ಶಮಸುದ್ದೀನ್ ನವೀದ್ ಹೆಸರಿನಲ್ಲಿತ್ತು. ಆಗ ಆರೋಪಿಯನ್ನು ವಿಚಾರಿಸಿದಾಗ ತನ್ನ ಗುರುತನ್ನು ಮುಚ್ಚಿಡಲು ಬೇರೆ ಬೇರೆ ಹೆಸರಿನಲ್ಲಿ ದಾಖಲೆಗಳನ್ನು ತಯಾರಿಸಿದ್ದೇನೆಂದು ಉತ್ತರಿಸಿರುತ್ತಾರೆ. ಆರೋಪಿಯ ಅಂಗ ಜಪ್ತಿ ಮಾಡಿದಾಗ ಆರೋಪಿಯ ಸೊಂಟದಲ್ಲಿ 10 ತೊಲೆಯ ತಲಾ ಒಂದರಂತೆ 8 ಪೀಸ್ ಗಳ ಚಿನ್ನದ ಬಿಸ್ಕೆಟ್ ಇರುವುದು ಕಂಡುಬಂದಿರುತ್ತದೆ. ಒಟ್ಟು 933.12 ಗ್ರಾಮ್ ನ ಚಿನ್ನವು ಆರೋಪಿಯಿಂದ ಸಿಕ್ಕಿರುತ್ತದೆ. ಚಿನ್ನದ ಮೌಲ್ಯ ಮಾಪನವನ್ನು ಸರಕಾರಿ ಮೌಲ್ಯ ಮಾಪಕರಿಂದ ಮಾಡಲಾಗಿ ಚಿನ್ನದ ಮೌಲ್ಯವು ಅಂದಾಜು ರೂ. 45 ಲಕ್ಷ ಆಗಿರುತ್ತದೆ ಎಂದು ಲಿಖಿತವಾಗಿ ನೀಡಿರುತ್ತಾರೆ. ಚಿನ್ನವನ್ನು ನಾವು ಜಪ್ತಿ ಮಾಡಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,</u>**

ಸದರಿ ಘಟನೆಯ ಲಕ್ನೋನಲ್ಲಿ ಆಗಿರುತ್ತದೆ. ಸದರಿ ಘಟನೆಯ ಪಿರ್ಯಾದಿಯನ್ನು ಯಾರು,ಯಾವಾಗ, ಯಾವ ಕಾರಣಕ್ಕೆ ದಾಖಲಿಸಿದ್ದಾರೆಂದು ನನಗೆ ಮಾಹಿತಿ ಇಲ್ಲ. ಸದರಿ ಘಟನೆ ಬಗ್ಗೆ ಭಟ್ಕಳ ಪೊಲೀಸ್ ಠಾಣೆಯಲ್ಲಿ ಯಾವುದೇ ಹೇಳಿಕೆ ನೀಡಿಲ್ಲ. ಕಸ್ಟಂ ಕಾನೂನಿನ ಪ್ರಕಾರ ಕಸ್ಟಂ ಅಧಿಕಾರಿಯ ಮುಂದೆ ಸದರಿ ಘಟನೆಯ ಬಗೆ ಲಕ್ನೊ ದಲ್ಲಿ ಪ್ರಕರಣದ ದಾಖಲಿಸಲಾಗಿದೆ ಮತ್ತು ಆದೇಶವು ಆಗಿರುತ್ತದೆ ಮತ್ತು ಕಸ್ಟಂ ನಿಯಮದ ಪ್ರಕಾರ ಆರೋಪಿ ವಿರುದ್ಧ ಕಾನೂನು ಕ್ರಮ ತೆಗದುಕೊಳ್ಳಲಾಗಿದೆ. ಸದರಿ ಭಟ್ಕಳ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ ಮತ್ತು ಸಮನ್ಸ ಬಂದ ಕಾರಣ ನಾನು ಭಟ್ಕಳ ನ್ಯಾಯಾಲಯಕ್ಕೆ ಹಾಜರು ಆಗಿದ್ದೇನೆ ಎಂದರೆ ಸದರಿ ಪ್ರಕರಣದ ಮುದ್ದೆ ಮಾಲುಗಳನ್ನು ನಾನೇ ಜಪ್ತು ಮಾಡಿದ್ದೇನೆಂದು ಉತ್ತರಿಸಿರುತ್ತಾರೆ. ನಾವು ಜಪ್ತಿ ಮಾಡಿರುವ ಮುದ್ದೆ ಮಾಲುಗಳು ಈಗ ಭಟ್ಕಳ ನ್ಯಾಯಾಲಯದಲ್ಲಿ ಇಲ್ಲ. ಆರೋಪಿಯು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಸದರಿ ಪ್ರಕರಣದ ದಾಖಲೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆಧಾರ ಕಾರ್ಡಗಳು ಮತ್ತು ಡ್ರೈವಿಂಗ್ ಲೈಸನ್ಸ ಗಳಿಗೆ ಮತ್ತು ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಕಲಿ ಆದಾರ್ ಕಾರ್ಡ ಮತ್ತು ಮೂಲ ಆದಾರ ಕಾರ್ಡ ಹಾಜರುಪಡಿಸಿರುವ ಲಕ್ನೊವಿನ ಪ್ರಕರಣದಲ್ಲಿರುವ ದಾಖಲೆಗಳು ಈಗ ಭಟ್ಕಳ

ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸರಿ. ಆದಾರ್ ಕಾರ್ಡ ಮತ್ತು ಡ್ರೈವಿಂಗ್ ಲೈಸನ್ಸ ಎಲ್ಲಿ ಪೊರ್ಜರಿ ಮಾಡಲಾಗಿದೆ ಎಂದು ನಾವು ವಿಚಾರಣೆ ಮಾಡಿಲ್ಲ ಕಾರಣ ನಾನು ತನಿಖಾಧಿಕಾರಿ ಆಗಿಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**